ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 1419/2022

ಪ್ರಾಸಾ : 01

ಚಾಸಾ : 01

| | | |
|---|---|---|
| ಹೆಸರು | : | ಉಮೇಶ್ |
| ತಂದೆಯ ಹೆಸರು | : | ವಿಶ್ವನಾಥ ಪೂಜಾರಿ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಸ್ವಂತ ಕೊಳ್ನಾಡು ಗ್ರಾಮ<br>ಹಾಲಿಃ ಬಂಟ್ವಾಳ |

ದಿಃ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿ. 09.06.2022 ರಂದು ನಾನು ವಗ್ಗದಿಂದ ಬಿಸಿರೋಡ್ ಕಡೆಗೆ ನನ್ನ ಬಾಬ್ತು ಕಾರಿನಲ್ಲಿ ಬರುವಾಗ ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಹೊಸಮಾರು ತಲುಪಿದಾಗ ನನ್ನ ಮುಂದೆ ಬಿಸಿರೋಡ್ ಕಡೆಗೆ ಕೆಎ-21-ಎಲ್-8172 ಬೈಕ್ ಹೋಗುತ್ತಿತ್ತು. ಎದುರುಗಡೆಯಿಂದ ದುಡುಕುತನದಿಂದ ಚಲಾಯಿಸಿಕೊಂಡು ಬಂದ ಇನ್ನೊಂದು ಬೈಕ್ ನನ್ನ ಮುಂದೆ ಹೋಗುತ್ತಿದ್ದ ಕೆಎ-21-ಎಲ್-8172 ಬೈಕ್ ಗೆ ಡಿಕ್ಕಿ ಹೊಡೆಯಿತು. ಪರಿಣಾಮವಾಗಿ ಸದರಿ ಬೈಕ್ ಸವಾರ ರಸ್ತೆಗೆ ಬಿದ್ದರು. ನಾನು ರಸ್ತೆ ಬದಿಗೆ ನನ್ನ ಬಾಬ್ತು ಕಾರನ್ನು ನಿಲ್ಲಿಸಿ ಸ್ಥಳಕ್ಕೆ ಹೋದೆ ಆಗ ಸಾರ್ವಜನಿಕರೆಲ್ಲರೂ ನೆರೆದರು. ಕೆಎ-21-ಎಲ್-8172 ಗಾಡಿಯ ಚಾಲಕ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆತ ನನ್ನ ಪರಿಚಯ ಪ್ರಭಾಕರ್. ಮೂಗು ಮತ್ತು ಕಿವಿಯಲ್ಲಿ ರಕ್ತ ಬರುತ್ತಿತ್ತು. ಅಪಘಾತ ಪಡಿಸಿದ ಮೋಟಾರ್ ಸೈಕಲ್ ನಂಬ್ರ ಕೆಎ-19-ಇಇ-9856 ಆಗಿತ್ತು ಮತ್ತು ಅದರ ಚಾಲಕನ ಹೆಸರು ಅಶೋಕ್ ಎಂದು ಗೊತ್ತಾಯಿತು. ಪ್ರಭಾಕರ್ ಮತ್ತು ಅಶೋಕ್ ರವರನ್ನು ಸಾರ್ವಜನಿಕರು ರಿಕ್ಷಾದಲ್ಲಿ ಬಂಟ್ವಾಳ ಸರ್ಕಾರಿ

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ನನ್ನ ಬಾಬ್ತು ಕಾರಿನಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ವೈದ್ಯರ ಸಲಹೆ ಮೇರೆಗೆ ಎ ಜೆ ಆಸ್ಪತ್ರೆ ಮಂಗಳೂರು ಅಂಬ್ಯುಲೆನ್ಸ್ ನಲ್ಲಿ ನಾನು ಕರೆದುಕೊಂಡು ಹೋಗಿರುತ್ತೇನೆ. ಮಾರನೇ ಬೆಳಿಗ್ಗೆಯವರೆಗೂ ಆಸ್ಪತ್ರೆಯಲ್ಲಿಯೇ ಇದ್ದೆ. ಅಪಘಾತವನ್ನು ವಾಹನಗಳ ಹೆಡ್ ಲೈಟ್ ನ ಸಹಾಯ ಮತ್ತು ಬೀದಿ ದೀಪದ ಸಹಾಯದಿಂದ ನೋಡಿರುತ್ತೇನೆ. ಅಶೋಕ್ ರವರ ತಪ್ಪಿನಿಂದಲೇ ಈ ಅಪಘಾತ ಆಗಿರುತ್ತದೆ.

2. ದಿ. 10.06.2022 ರಂದು ಮನೆಯಲ್ಲಿ ಸ್ವಲ್ಪ ಸಮಸ್ಯೆ ಇತ್ತು ಆಗಾಗಿ ದಿ. 11.06.2022 ರಂದು ಸಂಜೆ 6.00 ಗಂಟೆಗೆ ಮೆಲ್ಕಾರ್ ಠಾಣೆಗೆ ಹೋಗಿ ಲಿಖಿತ ದೂರು ನೀಡಿರುತ್ತೇನೆ. ಲಿಖಿತ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ಸಾಕ್ಷಿ ಸಹಿಯನ್ನು ತನ್ನದೆಂದು ನೋಡಿ ಗುರುತಿಸಿದ ಮೇರೆಗೆ ಸ್ಥಳ ಮಹಜರನ್ನು ನಿಪಿ-2 ಎಂದು, ನಕಾಶೆಯನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ದಿ. 12.06.2022 ರಂದು ಬಂಟ್ವಾಳ ಹೊಸಮಾರು ಎಂಬಲ್ಲಿ ಪೋಲಿಸರು ಬಂದಿದ್ದಾಗ ಅಪಘಾತ ಸ್ಥಳವನ್ನು ನಾನು ತೋರಿಸಿಕೊಟ್ಟಂತೆ ನಕಾಶೆ ಮತ್ತು ಮಹಜರನ್ನು ತಯಾರಿಸಿರುತ್ತಾರೆ. ಬೆಳಿಗ್ಗೆ 10.00 ರಿಂದ 11.30 ರ ಒಳಗೆ ಮಹಜರನ್ನು ತಯಾರಿಸಿರುತ್ತಾರೆ. ಸದರಿ ದಾಖಲೆಗೆ ಹ್ಯೂಬರ್ಟ್, ನಿತೇಶ್ ಮತ್ತು ನಾನು ಸಹಿ ಹಾಕಿರುತ್ತೇನೆ. ಸ್ಥಳದಲ್ಲಿದ್ದ ಅಪಘಾತಕ್ಕೆ ಒಳಗಾದ ಎರಡು ದ್ವಿಚಕ್ರ ವಾಹನಗಳನ್ನು ಪೋಲಿಸರು ವಶಕ್ಕೆ ತೆಗೆದುಕೊಂಡರು. ಫೋಟೋದಲ್ಲಿ ಕಾಣುವ ಕೆಎ-21-ಎಲ್-8172 ಮತ್ತು ಕೆಎ-19-ಇಇ-9856 ವಾಹನಗನ್ನು ಸಾಕ್ಷಿ ನೋಡಿ ಗುರುತಸಿದ ಮೇರೆಗೆ ಎಂಟು ಫೋಟೋಗಳನ್ನು ನಿಪಿ-4 ರಿಂದ ನಿಪಿ-11 ಎಂದು ಗುರುತಿಸಲಾಯಿತು. ಎರಡು ಸಿಡಿಗಳನ್ನು ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು.

4. ಸುಮಾರು ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದು ದಿ. 08.07.2022 ರಂದು ಎ ಜೆ ಆಸ್ಪತ್ರೆಯಲ್ಲಿ ಪ್ರಭಾಕರ್ ಮೃತ ಪಟ್ಟಿರುತ್ತಾರೆ ಎಂದು ನನಗೆ ಫೋನ್ ಮೂಲಕ ಗೊತ್ತಾಯಿತು. ಈ ವಿಚಾರವನ್ನು ನಾನು ಮತ್ತು ಮೃತರ ಬಾವ ಪೋಲಿಸ್ ಠಾಣೆಗೆ ಹೋಗಿ ಪೋಲಿಸರಿಗೆ ತಿಳಿಸಿರುತ್ತೇವೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಾಗಿ ವಿನಾಯಿತಿ ಕೋರಿರುತ್ತಾರೆ.

(ಆರೋಪಿ ಪರ ಸಾಕ್ಷಿಯಿಂದ ಆರೋಪಿಯನ್ನು ಗುರುತಿಸಲು ತಕರಾರು ಇದೆ ಎಂದು ಸಲ್ಲಿಸಿರುತ್ತಾರೆ ಮತ್ತು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ. ಆರೋಪಿಯನ್ನು ಹಾಜರುಪಡಿಸಿ ಪಾಟೀ ಸವಾಲನ್ನು ನಡೆಸುವ ನಿಬಂಧನೆಗೊಳಪಟ್ಟು ಕೋರಿಕೆಯ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು. )

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ